# ಕುರುಡನ ಹಾದಿಯಲ್ಲಿ

ಸೂಲಿಬೆಲೆ ಚಕ್ರವರ್ತಿ

## ಕುಂಟ-ಕುರುಡ

ಬಲು ಹಳೆಯ ಕತೆ. ಒಬ್ಬ ಕುರುಡ, ಮತ್ತೊಬ್ಬ ಕುಂಟನ ಕತೆ. ಒಮ್ಮೆ ಇಬ್ಬರೂ ಒಂದು ನಿರ್ಧಾರಕ್ಕೆ ಬರುತ್ತಾರೆ. ಕುರುಡ ಕುಂಟನನ್ನು ಹೆಗಲ ಮೇಲೆ ಕೂರಿಸಿಕೊಳ್ಳುತ್ತಾನೆ. ಕುಂಟ ದಾರಿ ತೋರುತ್ತಾನೆ, ಕುರುಡ ದಾರಿ ಸವೆಸುತ್ತಾನೆ. ಮನೆ ಮನೆಗೆ ಹೋಗಿ ಭಿಕ್ಷೆ ಬೇಡಿ ಇಬ್ಬರೂ ಹೊಟ್ಟೆ ತುಂಬಿಸಿಕೊಳ್ಳತೊಡಗುತ್ತಾರೆ. ಇದೆಲ್ಲ ಮೊದಮೊದಲು ಚೆನ್ನಾಗಿಯೇ ನಡೆದಿತ್ತು. ಬರಬರುತ್ತಾ ಕುಂಟ ಸ್ವಾರ್ಥಿಯಾಗತೊಡಗಿದ. ಭಿಕ್ಷೆಯಲ್ಲಿ ದೊರೆತ ಒಳ್ಳೆಯ ಪದಾರ್ಥಗಳನ್ನು ತಾನು ತಿಂದು, ಹಳಸಿದ, ಅಯೋಗ್ಯ ಆಹಾರ ವನ್ನು ಕುರುಡನಿಗೆ ಕೊಡತೊಡಗಿದ. ಹೇಗೂ ಕಣ್ಣು ಕಾಣದಲ್ಲ!? ಇತ್ತ ಕುಂಟ ಚೆನ್ನಾಗಿ ತಿಂದುಂಡು ಬಲಿಷ್ಠನಾದರೆ, ಅತ್ತ ಕುರುಡ ಸತ್ವಹೀನನಾಗಿ ಕೃಶನಾಗುತ್ತಾ ಸಾಗಿದ.




ಈ ಕಥೆ ನಮ್ಮ ದೇಶಕ್ಕೆ ಹೊಂದುವ ಮಾತು. ಕತೆಯ ಕುಂಟ ಇಂಡಿಯಾ, ಕುರುಡ ಭಾರತ ! ಜಾಗತೀಕರಣದ ಸೌಲಭ್ಯ, ಸವಲತ್ತುಗಳನ್ನು ಪಡೆದು ಕೊಬ್ಬಿ ಬೆಳೆಯುತ್ತಿರುವ *ಇಂಡಿಯಾ* ಸವಾರಿ ಮಾಡುತ್ತಿರುವುದು, ಅದರ ದುಷ್ಪರಿಣಾಮ ಉಣ್ಣುತ್ತಿರುವ *ಭಾರತದ* ಮೇಲೆ!

## ವಸುಧೈವ ಕುಟುಂಬಕಮ್

ಜಾಗತೀಕರಣ ಅಂದರೆ, ಇಡಿಯ ಜಗತ್ತನ್ನೇ ಒಂದು ಹಳ್ಳಿಯಾಗಿಸುವ ಒಂದು ಪ್ರಕ್ರಿಯೆ.

'ಗ್ಲೋಬಲ್ ವಿಲೇಜ್' (ವಿಶ್ವಗ್ರಾಮ) ಅನ್ನುವ ಮಾತು ಈಗ ಎಲ್ಲೆಡೆ ಕೇಳಿ ಬರುತ್ತಿದೆ. ಆದರೆ ನಮ್ಮಲ್ಲಿ ಬಹುತೇಕರಿಗೆ ಗೊತ್ತಿಲ್ಲ, ಭಾರತೀಯರಾದ ನಮ್ಮ ಜಾಗತೀಕರಣದ ಕಲ್ಪನೆ ಇನ್ನೂ ವಿಶಾಲ, ಆಳ. ಜಗತ್ತು ಹಳ್ಳಿಯ ಮಾತಾಡಿದರೆ, ನಾವು ಕುಟುಂಬದ ಮಾತಾಡುತ್ತೇವೆ. ಜಗತ್ತನ್ನೇ ಒಂದು ಕುಟುಂಬವಾಗಿ ಮಾಡಿ ನಾವೆಲ್ಲ ಅಣ್ಣ ತಮ್ಮಂದಿರಂತೆ ಶುದ್ಧ ಅಂತಃಕರಣ ಯುಕ್ತರಾಗಿ ಬದುಕುವುದು ಭಾರತೀಯರಾದ ನಮ್ಮ ಚಿಂತನೆ. ಈ ಚಿಂತನೆಯೇ ನಮ್ಮ ಸಂಸ್ಕೃತಿಯ ಜೀವಾಳವಾದ್ದರಿಂದ, ನಾವು ಜಗತ್ತನ್ನು ಮಾರುಕಟ್ಟೆಯಾಗಿಸುವ ಮಾತನಾಡುವುದಿಲ್ಲ; ಭೋಗವಾದದಿಂದ ಜಗತ್ತನ್ನೇ ವಿನಾಶಕ್ಕೆ ತಳ್ಳಿಬಿಡುವ ಚರ್ಚೆ ಯನ್ನಂತೂ ಮಾಡುವುದೇ ಇಲ್ಲ.

## ನಗರದ ಪಾಡು

**ಜಾಗತೀಕರಣದ ಶಾಪ:** ಭಾರತೀಯರಾದ ನಾವು ಯಾವುದು ಎಂದಿಗೂ ಆಗಲೇಬಾರದೆಂದು ಬಯಸಿದ್ದೆವೋ ಅದೇ ಈಗ ಆಗುತ್ತಿರುವುದು ದುರಂತ, ದೌರ್ಭಾಗ್ಯ! ಪ್ರಾಪಂಚಿಕತೆಯ ಹಿಂದೆ ಮನುಷ್ಯರನ್ನು ಅಟ್ಟಿ, ನಿಜವಾದ ಸುಖ-ಶಾಂತಿ-ನೆಮ್ಮದಿ ಕಳೆದು ಕೊಳ್ಳುತ್ತಿರುವ ಜನರನ್ನು ಜಾಗತೀಕರಣ ಸೃಷ್ಟಿಸುತ್ತದೆ. ಹುಟ್ಟುವ ಪ್ರತಿಯೊಂದು ಮಗುವಿನ ತಂದೆತಾಯಿಯರೂ ಮುಂದೆ ಅದು ಸಾಫ್ಟ್‌ವೇರ್ ಇಂಜಿನಿಯರ್ ಆಗಲೆಂದೇ ಬಯಸುತ್ತಾರೆ. ಹೀಗೆ ಇಂಜಿನಿಯರ್ ಆಗುವ ಬಯಕೆಯ ಹಿಂದೆ ಇರುವ ಮುಖ್ಯ ಕಾರಣ, ವಿದೇಶಗಳಲ್ಲಿ ಧಂಡಿಯಾಗಿ ಗಳಿಸಬಹುದಾದ ಡಾಲರ್‌ಗಳೇ ಹೊರತು ಮತ್ತೇನಲ್ಲ. ಬೆಳಗ್ಗೆ ಎಂಟರಿಂದ ರಾತ್ರಿ ಎಂಟರವರೆಗೆ ದುಡಿಯುವ ಮಗ, ಕೆಲಸಕ್ಕೆ ಸೇರಿದ ಕೆಲವೇ ತಿಂಗಳಲ್ಲಿ ಬದುಕುವ ಉತ್ಸಾಹವನ್ನೇ ಕಳೆದುಕೊಂಡುಬಿಡು ತ್ತಾನೆಂಬುದನ್ನು ಆ ತಂದೆತಾಯಿಗಳು ಗುರುತಿಸುವುದೇ ಇಲ್ಲ. ಅತ್ಯಂತ ಬುದ್ಧಿವಂತನಾದ, ಚುರುಕಾಗಿ ಕೆಲಸ ಮಾಡಬಲ್ಲ ಯುವಕರು, ಕೂಲಿ ಕಾರ್ಮಿಕರಂತೆ, ತಮ್ಮ ಫಿರಂಗಿ ಒಡೆಯರು ಹೇಳಿದ್ದನ್ನು ಮಾಡುತ್ತಾ ಕೂರುವವರಾಗಿಬಿಡುತ್ತಾರಲ್ಲ! ಇದು ಜಾಗತೀಕರಣದ ದೊಡ್ಡ ಶಾಪ. ಇಷ್ಟಕ್ಕೂ ಆಶಿಷ್ಠ, ದೃಢಿಷ್ಠ, ಬಲಿಷ್ಠರಾಗಿರುವ ನಮ್ಮ ಯುವಕರು ಹವಾ ನಿಯಂತ್ರಿತ ಕೋಣೆ ಗಳಲ್ಲಿ ಕುಳಿತು ಮಾಡುವುದೇನು ಗೊತ್ತೇ? ಅಮೆರಿಕದ ಬ್ಯಾಂಕಿನ ವಹಿವಾಟುಗಳ ಲೆಕ್ಕ ಇಡುವುದು, ಅಲ್ಲಿನ ಸೂಪರ್ ಬಜಾರುಗಳ ಬಿಲ್ಲಿಂಗ್ ವ್ಯವಸ್ಥೆ ನೋಡಿಕೊಳ್ಳುವುದು ಇಂಥದ್ದೇ ಕೆಲಸ. ಎಷ್ಟೋ ಇಂಜಿನಿಯರುಗಳಿಗೆ ತಾವೇನು ಕೆಲಸ ಮಾಡುತ್ತಿದ್ದೇವೆಂಬ ಅರಿವೇ ಇರದಂತಹ ವಿಷಮ ಪರಿಸ್ಥಿತಿ ಇದೆ. ಅಂದರೆ, ಮೂಕ ನಾಗಿ - ಪ್ರಶ್ನೆಗಳನ್ನೇ ಕೇಳದೆ, ಕತ್ತೆಯಂತೆ ಕೆಲಸ ಮಾಡೋದಕ್ಕೆ ಸಿಗುವ ಪ್ರತಿಫಲ - ಐದಂಕಿ ಸಂಬಳ! ಇದರಿಂದಾಗಿ ಸಮಾಜದ ವ್ಯವಸ್ಥೆಯೇ ಕೆಟ್ಟು ಹೋಗಿರುವುದನ್ನು ನಾವು ಕಾಣುತ್ತೇವೆ.

ಸೂಕ್ತ ಸಂಬಳ ದೊರೆಯದು ಎನ್ನುವ ಕಾರಣಕ್ಕೇ ಯುವಕರು ಶಿಕ್ಷಕ ವೃತ್ತಿಯನ್ನು ಆರಿಸಿಕೊಳ್ಳುತ್ತಿಲ್ಲ; ವೈದ್ಯರಾಗುವುದನ್ನೂ ಧಿಕ್ಕರಿಸಿ ಸಾಫ್ಟ್‌ವೇರ್ ಕ್ಷೇತ್ರವನ್ನು ಆರಿಸಿಕೊಳ್ಳುತ್ತಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ? ಭೂಮಿಯ ಬೆಲೆ ಗಗನಕ್ಕೇರಿ, ಕೃಷಿ ಮಾಡಬೇಕೆಂದಿದ್ದ ರೈತ, ದಿನವಿಡೀ ಹೀಗೆ ಸುಮ್ಮನೆ ದುಡಿಯುವುದಕ್ಕಿಂತ ಭೂಮಿ ಮಾರುವುದೇ ಲೇಸು ಎಂದು ಚಿಂತಿಸುತ್ತಾನೆ. ಇದೂ ಕೂಡ ಜಾಗತೀಕರಣದ್ದೇ ಆದ ವಿಷಬೀಜ.

**ಸಂಸ್ಕೃತಿಯಿಂದ ದೂರ:** ಇಷ್ಟಕ್ಕೆ ಮುಗಿಯಲಿಲ್ಲ. ಹಣದ ಅಮಲಿಗೆ ಬಿದ್ದ ನಮ್ಮ ಯುವಕ-ಯುವತಿಯರಿಗೆ ಮಾನವೀಯ ಸಂಬಂಧಗಳೇ ಬೇಡವಾಗುತ್ತವೆ. ಬೆಂಗಳೂರಿನ ಯಾವುದೇ ಕೌನ್ಸಿಲಿಂಗ್ ಸೆಂಟರಿನೆದುರು ನಿಂತರೂ ನಿಮ್ಮ ಕಣ್ಣಿಗೆ ಬೀಳುವುದು ವಿವಾಹವಿಚ್ಛೇದನದ ಬಯಕೆ ಹೊತ್ತು ನಿಂತಿರುವ ಹತ್ತಾರು ಯುವ ಜೋಡಿಗಳು! ಅವರ ಮನೆಯಲ್ಲಿ ಹಬ್ಬ ಹರಿದಿನಗಳಿಲ್ಲ. ಕುಟುಂಬದೊಡನೆ ಮುಕ್ತವಾಗಿ ಬೆರೆಯಲು ಸಮಯವಿಲ್ಲ. ಸೋಮವಾರದಿಂದ ಶುಕ್ರವಾರದ ವರೆಗೆ ದುಡಿದವರು, ಶನಿವಾರ ಭಾನುವಾರಗಳಂದು ಮೋಜಿನಲ್ಲಿ ಮತ್ತು ಮದ್ಯದ ಅಮಲಿನಲ್ಲಿ ಮೈಮರೆತು ಕಾಲ ಕಳೆಯಬೇಕೆಂದು ಅವರು ಕೆಲಸ ಮಾಡುವ ಕಂಪನಿಗಳು ಬಯಸುತ್ತವೆ. ಹೀಗಾಗಿ ಆ ಎರಡು ದಿನಗಳು ಪಾರ್ಟಿಗಳಿಗಾಗಿ, ಪಿಕ್ನಿಕ್‌ಗಳಿಗಾಗಿ ಕಳೆದುಹೋಗುತ್ತವೆ. ಈಗತಾನೇ ಕಾಲೇಜು ಮುಗಿಸಿ ಬಂದ ಯುವಕ ಯುವತಿಯರಂತೂ ಝಗಮಗಿಸುವ ತಮ್ಮದೇ ಆದ ಪ್ರಪಂಚದಲ್ಲಿ ಮುಳುಗಿಹೋಗುತ್ತಾರೆ. ಜಾಗತೀಕರಣದ ಮಾಯೆಯ ಬಲೆಯ ಪ್ರಭಾವ ಅವರನ್ನು ನಮ್ಮ ಸಂಸ್ಕೃತಿಯಿಂದ ಬಲುದೂರ ಕರೆದೊಯ್ದುಬಿಡುತ್ತದೆ.

## ಹಳ್ಳಿಯ ಗೋಳು

**ರೈತನ ಬವಣೆ:** ಇದಕ್ಕೆ ವ್ಯತಿರಿಕ್ತವಾದುದು ಹಳ್ಳಿಗಾಡಿನಲ್ಲಿರುವ ನಮ್ಮ ರೈತನ ಬವಣೆ. ಹಸಿರುಕ್ರಾಂತಿಯ ಆರಂಭದಲ್ಲಿ ಹೆಚ್ಚು ಹೆಚ್ಚು ಬೆಳೆ ಎನ್ನುತ್ತಾ ಅವನ ಕೈಗೆ ರಾಸಾಯನಿಕ ಗೊಬ್ಬರ ಕೊಟ್ಟೆವು; ಬೀಜವನ್ನಿತ್ತು, ಔಷಧಿಯನ್ನೂ ಕೊಟ್ಟೆವು. ಆತ ಎಲ್ಲವನ್ನೂ ಬಳಸಿದ. ಮೊದಲ ಕೆಲ ವರ್ಷ ಬೆಳೆಯೂ ಚೆನ್ನಾಗಿ ಬಂತು. ಈಗ ರಾಸಾಯನಿಕ ಗೊಬ್ಬರ ಮತ್ತು ವಿಷ ಪೂರಿತ ಔಷಧಿಗಳ ಪ್ರಭಾವದಿಂದ ಭೂಮಿಯೂ ಬಂಜರಾಗಿ, ಬೆಳೆ ತೆಗೆಯುವುದೇ ಕಷ್ಟವೆಂದ ಮೇಲೆ ಒಬ್ಬೊಬ್ಬರಾಗಿ ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಪಡೆದ ಸಾಲ ತೀರಿಸಲಾಗದೇ ನೇಣುಕುಣಿಕೆಗೆ ಕೊರಳೊಡ್ಡುವ ಸ್ಥಿತಿ ನಮ್ಮ ದೇಶದ ರೈತನಿಗೇಕೆ, ಈಗ ಮಾತ್ರ, ಹೇಗೆ ಬಂತು? ಹಿಂದೆ ಅದೆಷ್ಟು ಕಷ್ಟವಾದರೂ ಅವನು ತಾಳಿಕೊಳ್ಳಲಿಲ್ಲವೇ? ಈ ಬಗ್ಗೆ ನಾವೆಂದಾದರೂ ಯೋಚಿಸಿದ್ದೇವೆಯೇ?

**ಹಸಿವಿನ ಹಾಹಾಕಾರ :** ಒಂದು ಕಾಲದಲ್ಲಿ ಜಗತ್ತಿನಲ್ಲೇ ಧಾನ್ಯದ ಕಣಜವಾಗಿದ್ದ ನಮ್ಮ ನಾಡಿನ ೪೦ ಕೋಟಿ ಜನರು, ಜಾಗತೀಕರಣದ ಈ ಸೊಂಪಿನ ಕಾಲದಲ್ಲೂ ದಿವಸಕ್ಕೆ ಒಂದೇ

> ಕೃಷಿಕನ ದರಿದ್ರ ನಿವಾಸದಿಂದ ನೇಗಿಲನ್ನು ಹಿಡಿದು ನವೀನ ಭಾರತವು ಮೈದೋರಲಿ. ಬೆಸ್ತನ ಜೋಪಡಿಯಿಂದ, ಚಮ್ಮಾರ, ಜಾಡಮಾಲಿಗಳ ಬಡ ಗುಡಿಸಿಲಿನಿಂದ, ಅದು ಹೊರಹೊಮ್ಮಲಿ. ಮಳಿಗೆಯಿಂದ, ಕಾರ್ಖಾನೆಯಿಂದ, ಅಂಗಡಿಯಿಂದ, ಸಂತೆಯಿಂದ ಆಕೆ ಪ್ರತ್ಯಕ್ಷವಾಗಲಿ. ಪರ್ವತ ಕಾನನಗಳಿಂದ, ಕಂದರವನಗಳಿಂದ ನವ ಭಾರತದ ಮೂರ್ತಿ ರೂಪುಗೊಳ್ಳಲಿ.
>
> -ಸ್ವಾಮಿ ವಿವೇಕಾನಂದ

ಹೊತ್ತಿನ ಊಟ ಮಾಡಲು ಸಾಧ್ಯ ಎಂಬ ವಿಚಾರದ ಅರಿವು ನಮಗಿದೆಯೇ? ಅಷ್ಟು ಆಹಾರವನ್ನು ಕೂಡ ಮಾರುಕಟ್ಟೆಯಲ್ಲಿ ಕೊಳ್ಳಲಾಗದ ಭೀಕರ ಬಡತನದಲ್ಲಿ ಆ ನಮ್ಮ ನತದೃಷ್ಟ ದೇಶ ಬಾಂಧವರು ನರಳುತ್ತಿದ್ದಾರೆ ಎಂಬ ಅಂಶವನ್ನು, ನಮ್ಮ ಬಹುತೇಕ ಮಾಧ್ಯಮಗಳು ಅದೇತಕ್ಕೆ ಮರೆಮಾಚುತ್ತಿವೆಯೋ? ಈ ದೇಶದ ಮುಕ್ಕಾಲು ಪಾಲು ಜನರಿಗೆ ಸೂಕ್ತವಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ನಮಗಿನ್ನೂ ಸಾಧ್ಯವಾಗಿಲ್ಲ! ಒಂದೆಡೆ ಜಾಗತೀಕರಣದ ತಮಟೆ ಬಾರಿಸುತ್ತಾ, ಏರುತ್ತಿರುವ ಸೆನ್ಸೆಕ್ಸನ್ನು (Sensex), ಬೆಳೆಯುತ್ತಿರುವ ಬಿಲಿಯನರ್‌ಗಳ ಸಂಖ್ಯೆಯನ್ನು ಇಡೀ ಜಗತ್ತಿಗೆ ತೋರಿಸುತ್ತಿದ್ದೇವೆ. ಮತ್ತೊಂದೆಡೆ ಆತ್ಮಹತ್ಯೆಗೆ ಶರಣಾಗುವ ರೈತ, ಹಸಿವಿನಿಂದ ಕಂಗಾಲಾಗಿ ತಮ್ಮ ಮಕ್ಕಳನ್ನೇ ಕೊಂದು ಸಾವನ್ನೇ ನೆಮ್ಮದಿಯ ತಾಣವಾಗಿ ಕಂಡುಕೊಂಡ ನೂರಾರು ತಾಯಂದಿರು – ಇವರೆಲ್ಲ ನಮ್ಮ ಆರ್ಥಿಕ ತಜ್ಞರ ಕಾಮಾಲೆಕಣ್ಣುಗಳಿಗೆ ಬಿದ್ದೇ ಇಲ್ಲವೇ? ಹೀಗೆ ಅಸಂಖ್ಯಾತ ದುರಂತ ವೈಪರೀತ್ಯಗಳನ್ನು ಜಾಗತೀಕರಣ ನಮ್ಮ ನಾಡಿನಲ್ಲಿ ಸೃಷ್ಟಿಮಾಡಿದೆ.

## ಮೇಲ್ಪದರದಿಂದ ಕೆಳಪದರಕ್ಕೆ

**ಕೆನೆಯ ಸತ್ವ ಕೆಳಗೂ ಇಳಿಯಲಿ:** ಜಾಗತೀಕರಣ ಮೇಲ್ನೋಟಕ್ಕೆ ಲಾಭ ಕೊಡುವುದು ಮೇಲ್ಪದರಕ್ಕೆ ಮಾತ್ರ. ಮೇಲ್ಪದರ ಅಂದರೆ ಹಾಲಿನ ಕೆನೆಯಿದ್ದಂತೆ. ಈ ಕೆನೆ ನಿರ್ಮಾಣವಾಗುವುದು ಹಾಲಿನ ಸತ್ವವನ್ನು ಹೀರಿಕೊಂಡು. ಜಾಗತೀಕರಣದ ಲಾಭ ಪಡೆಯುತ್ತಿರುವ ಮೇಲ್ಪದರದ (ಶ್ರೀಮಂತ ವರ್ಗ) ನಿರ್ಮಾಣವೂ ಅಷ್ಟೇ. ಹಳ್ಳಿಗಳ ಸತ್ವ ಹೀರಿಯೇ ಈ ಮೇಲ್ಪದರದ ಕೆನೆ ರೂಪುಗೊಂಡಿದೆ. ಈಗ ನಾವು ಪಡೆದ ಈ ಸತ್ವವನ್ನು ಹಂತಹಂತವಾಗಿ ಕೆಳವರ್ಗಕ್ಕೆ ಇಳಿಸುತ್ತ, ಜಾಗತೀಕರಣದ ಲಾಭ ಎಲ್ಲರಿಗೂ ದೊರೆಯುವಂತೆ ಮಾಡಬೇಕಾದ್ದು, ಮೇಲ್ಪದರಲ್ಲಿದ್ದುಕೊಂಡು ಹಾಯಾಗಿರುವ ನಮ್ಮೆಲ್ಲರ ಕರ್ತವ್ಯವಾಗಿದೆ.

**ಶಕ್ತಿ ತೋರಿಸಿ:** ಈ ನಿಟ್ಟಿನಲ್ಲಿ ಹಲವಾರು ಪ್ರಯತ್ನಗಳು ಈಗಾಗಲೇ ಆರಂಭವಾಗಿವೆ. ಬೆಂಗಳೂರಿನ ಅನೇಕ ಸಾಫ್ಟ್‌ವೇರ್ ಉದ್ಯೋಗಿಗಳು ತಾವೇ ಒಂದು ತಂಡ ಕಟ್ಟಿಕೊಂಡು ದೂರದ ಬಳ್ಳಾರಿಯಲ್ಲಿ ಶಾಲೆ ನಡೆಸುತ್ತಿದ್ದಾರೆ. ತಮ್ಮಲ್ಲಿನ ಸಾಹಿತ್ಯಸಂವೇದನೆಯನ್ನು ಜೀವಂತವಾಗಿರಿಸಿಕೊಳ್ಳುವ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಹಲವಾರು ಕಾಲೇಜುಗಳಿಗೆ ಭೇಟಿ ಕೊಟ್ಟು, ವಿದ್ಯಾರ್ಥಿಗಳಿಗೆ,

"ನೀವಾಗಬೇಕಾದುದು ಸಾಫ್ಟ್‌ವೇರ್ ಕೂಲಿಗಳಲ್ಲ. ಅದಕ್ಕೆ ಬದಲಾಗಿ, ಒಂದು ಕಂಪನಿಯನ್ನೇ ಕಟ್ಟಿ, ಅದರ ಒಡೆಯರಾಗಿ. ಆ ಮೂಲಕ, ಜಗತ್ತಿಗೆ ಭಾರತೀಯರ ಶಕ್ತಿ ತೋರಿಸಿ" ಎಂದು ಹೇಳಿಕೊಡುತ್ತಿದ್ದಾರೆ.

## ಎದ್ದೇಳು, ಭಾರತ!

**ಕರಿಯ ಚರ್ಮದ ಆಂಗ್ಲರು:** ಮಹಾತ್ಮ ಗಾಂಧೀಜಿಯವರ 'ಹಿಂದ್ ಸ್ವರಾಜ್' ಪರಿಕಲ್ಪನೆಗಳು ಇಂದಿಗೂ ಸೂಕ್ತವಾಗುವುದು ಅದಕ್ಕೇ. ೧೯೪೫ರಲ್ಲಿ ಜವಹರಲಾಲ ನೆಹರೂ ಅವರಿಗೆ ಪತ್ರ ಬರೆದ ಗಾಂಧೀಜಿ "ನಾವೆಲ್ಲರೂ ವಾಸಿಸಬೇಕಾಗಿರುವುದು ಅರಮನೆಗಳಲ್ಲಲ್ಲ, ಬಂಗಲೆಗಳಲ್ಲಲ್ಲ, ಜಗತ್ತಿನ ಉದ್ಧಾರಕ್ಕೋಸ್ಕರ ನಾವು ಗ್ರಾಮಗಳಲ್ಲಿ ವಾಸಿಸುವುದನ್ನು ಕಲಿಯಬೇಕಿದೆ" ಎಂದಿದ್ದರು. ಆಧುನಿಕ, ನಾಗರಿಕ ಎನ್ನುವ ಹೆಸರಿನಲ್ಲಿ ನಾವು ಹಳ್ಳಿಗಳಿಂದ ದೂರವಾಗುತ್ತಿದ್ದೇವೆ. ಈ ಮೂಲಕ ನಾಡಿನ ಸಂಸ್ಕೃತಿಯಿಂದಲೂ ದೂರವಾಗುತ್ತಿದ್ದೇವೆ. ಉತ್ತರ ಕರ್ನಾಟಕದ ಬಡ ಜನರ ಚಿತ್ರ ನೋಡಿದ ಬೆಂಗಳೂರಿನ ಯುವಕಯುವತಿಯರು "ಅಬ್ಬಾ! ಮಂಗಳಗ್ರಹದಿಂದ ಬಂದವರಂತೆ ಕಾಣುತ್ತಾರೆ" ಎಂದು ಹೇಳಿದರೆ ಖಂಡಿತ ಅಚ್ಚರಿಪಡಬೇಡಿ. ಈಗಿನ ಪರಿಸ್ಥಿತಿ ಹಾಗೆಯೇ ಇದೆ. ನಾವೆಲ್ಲ ಮೆಕಾಲೆ ಬಯಸಿದಂತೆ (*ಬಾಕ್ಸ್ ನೋಡಿ*) ಕರಿಯ ಚರ್ಮದ ಆಂಗ್ಲರಾಗಿಬಿಟ್ಟಿದ್ದೇವೆ. ನಮ್ಮ ಆಲೋಚನೆಗಳು, ಚಿಂತನೆಗಳು, ಉಡುಗೆ ತೊಡುಗೆಗಳು– ಇವೆಲ್ಲವೂ ಪಾಶ್ಚಾತ್ಯೀಕರಣಕ್ಕೊಳಗಾಗಿವೆ. ಈ ಭ್ರಮೆಯಿಂದ ಹೊರಬರದ ಹೊರತು ಸಮರ್ಥ ಭಾರತದ ನಿರ್ಮಾಣ ಅಸಾಧ್ಯವೇ ಸರಿ.

**ಅಜ್ಞಾನದಿಂದ ಸುಜ್ಞಾನದತ್ತ:** ಆದ್ದರಿಂದ, ಭಾರತದ ಅಂತಃಸತ್ವವನ್ನು, ಆತ್ಮಶಕ್ತಿಯನ್ನು ಅರಿಯುವ ಪ್ರಯತ್ನವನ್ನು ನಾವಿಂದು ಮಾಡಬೇಕಿದೆ. 'ನಾವು ಕುರಿಗಳಲ್ಲ, ಹುಲಿಗಳು' ಎಂದು ವಿವೇಕಾನಂದರು ಅಂದು ಹೇಳಿದ ಮಾತು ಅಂದಿನಷ್ಟೇ ಇಂದಿಗೂ ಪ್ರಸ್ತುತ. ಜಾಗತೀಕರಣದ ಆಕ್ಟೋಪಸ್ ನಮ್ಮನ್ನು ತನ್ನ ಮುಷ್ಟಿಯಲ್ಲಿ ಹಿಡಿದುಕೊಳ್ಳುವ ಮುಂಚೆಯೇ, ನಾವು ನಮ್ಮ ಸುಜ್ಞಾನದ, ಶಾಂತಿ–ಅಹಿಂಸೆ–ವಿವೇಕಗಳ ಹಸ್ತ ಚಾಚಿ, ಜಗತ್ತನ್ನು ನೆಮ್ಮದಿಯತ್ತ ಕೊಂಡೊಯ್ಯಬೇಕಿದೆ.

**ಸದ್ಯದ ಮಟ್ಟಿಗೆ ಅದೇ ದೊಡ್ಡ ಸವಾಲು.**

### ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮೆಕಾಲೆಯ ಭಾಷಣ

ನಾನು ಭಾರತದ ಉದ್ದಗಲಕ್ಕೂ ಸಂಚಾರ ಮಾಡಿದಾಗ ಒಬ್ಬನೇ ಒಬ್ಬ ಕಳ್ಳನನ್ನೂ ನೋಡಲಿಲ್ಲ. ಅತ್ಯಧಿಕ ಐಶ್ವರ್ಯವನ್ನು ಈ ದೇಶದಲ್ಲಿ ಕಂಡೆ. ಈ ದೇಶದಲ್ಲಿ ಉದಾತ್ತ ನೈತಿಕ ಮೌಲ್ಯಗಳುಳ್ಳ, ಅಂತಃಸತ್ವವುಳ್ಳ ಶ್ರೇಷ್ಠ ಜನತೆಯನ್ನೂ ಕಂಡೆ. ಈ ದೇಶದ ಬೆನ್ನೆಲುಬಾದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ನಾಶ ಮಾಡಿದಲ್ಲದೆ ಈ ದೇಶವನ್ನು ಗೆಲ್ಲುವುದು ಸುಲಭವಲ್ಲ. ಆದುದರಿಂದ ನಾನು ಭಾರತದ ಪುರಾತನ ವಿದ್ಯಾಭ್ಯಾಸ ಪದ್ಧತಿಯನ್ನು, ಸಂಸ್ಕೃತಿಯನ್ನೂ ಕೂಡ ಬದಲಿಸಬೇಕೆಂದು ಸಲಹೆ ಕೊಡುತ್ತೇನೆ. 'ಇಂಗ್ಲೀಷ್' ಹಾಗೂ 'ಪಾಶ್ಚಾತ್ಯ' ಎಂಬುದು ತಮ್ಮೆಲ್ಲ ಸಂಸ್ಕೃತಿಗಿಂತ ಶ್ರೇಷ್ಠ ಎನ್ನುವ ಭಾವನೆ ಅವರಲ್ಲಿ ಬಂದುಬಿಟ್ಟರೆ ಅವರು ತಮ್ಮ ಉದಾತ್ತ ಸ್ವಂತ ಸಂಸ್ಕೃತಿಯನ್ನೂ ಘನತೆಯನ್ನೂ ಕಳೆದುಕೊಳ್ಳುತ್ತಾರೆ. ಆಗ ಅವರು ನಮಗೆ ಅವರೇನಾಗಬೇಕೆಂದಿದೆಯೋ ಅಂತಹ, ನಿಜವಾಗಿ ನಮ್ಮ ಅಧೀನರಾಷ್ಟ್ರವಾಗಿ ಆಗಿಯೇ ತೀರುವರು. *–ಲಾರ್ಡ್ ಮೆಕಾಲೆ ೧೮೩೫ ರ ಫೆಬ್ರವರಿ ೨ರಂದು ಬ್ರಿಟಿಷ್ ಸಂಸತ್ತಿನಲ್ಲಿ ಮಾಡಿದ ಭಾಷಣ.*

## ಆತಂಕಕಾರಿಯಾದ ಆನ್ ಲೈನ್ ಆಟಗಳು

೨೦೦೩ನೇ ಇಸವಿಯ ಜುಲೈ ತಿಂಗಳ ಒಂದು ಮುಂಜಾನೆ. ಫಿಲಿಪೈನ್ಸಿನ ಮಕಾಟಿ ನಗರದ ಮಾಪುಆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕೋಣೆಯೊಂದರಲ್ಲಿ ಕಂಪ್ಯೂಟರ್ ತರಗತಿ ಆರಂಭವಾಗಿತ್ತು. ಗೆಳೆಯರೆಲ್ಲ ಪರೀಕ್ಷೆಯ ಉತ್ತರ ಬರೆಯುವುದರಲ್ಲಿ ನಿರತರಾಗಿದ್ದಾರೆ. ಸ್ಟಾನ್ಲಿ ವಿನ್ಸೆಂಟ್ ದಿಮಾಯಾ ಎಂಬ ಹೆಸರಿನ ಹದಿನೆಂಟು ವರ್ಷದ ಕಂಪ್ಯೂಟರ್ ವಿದ್ಯಾರ್ಥಿ ತನ್ನ ಏಕಾಗ್ರತೆಯನ್ನು ಕಳೆದುಕೊಳ್ಳುತ್ತಿದ್ದ. ಕಾರಣ ಅವನ ಮನಸ್ಸೆಲ್ಲ ಇಂಟರ್‌ನೆಟ್ ಕ್ರೀಡೆಯಲ್ಲಿ ಹೋರಾಡುವ ವೀರಯೋಧರತ್ತಲೇ ಕೇಂದ್ರೀಕೃತವಾಗಿತ್ತು. ಅನಿಷ್ಟಕಾರಿ ಪೆಡಂಭೂತಗಳು, ಮನುಷ್ಯರನ್ನೇ ಆಹುತಿ ತೆಗೆದುಕೊಳ್ಳುವ ವಿಕಾರರೂಪಿ ಪಿಶಾಚಿಗಳು ಅವನ ತಲೆಯಲ್ಲಿ ಲಾಗ ಹಾಕುತ್ತಿದ್ದವು. ಅವನು ಮರುಕ್ಷಣದಲ್ಲಿ ಮೇಲೆದ್ದು, ತನ್ನ ಶಿಕ್ಷಕರ ಬಳಿ ಬಂದು ಹೇಳಿದ. "ಸಾರ್, ನನಗೆ ವಿಪರೀತ ಹೊಟ್ಟೆನೋವು, ಮನೆಗೆ ಹೋಗುತ್ತಿದ್ದೇನೆ." ಕೂಡಲೇ ಶಾಲೆಗೆ ಹತ್ತಿರವಿದ್ದ ಇಂಟರ್‌ನೆಟ್ ಕೆಫೆಗೆ ಹೋಗಿ ಆತ ತನ್ನ ಶಾಲೆ, ಪರೀಕ್ಷೆ ಎಲ್ಲವನ್ನೂ ಮರೆತುಬಿಟ್ಟ. ಇಂಟರ್‌ನೆಟ್ ಕ್ರೀಡೆ ಆಡಲು ಆರಂಭಿಸಿ, ಕ್ಷಣಾರ್ಧದಲ್ಲಿ ಮಾಯಾಲೋಕದಲ್ಲಿ ಮುಳುಗಿಹೋದ. ಕಂಪ್ಯೂಟರ್ ಬಾಡಿಗೆಗಾಗಿ ಜೇಬನ್ನು ತಡಕಾಡಿದವನಿಗೆ, ಕಂಪ್ಯೂಟರ್ ಪಠ್ಯಪುಸ್ತಕದ ಖರೀದಿಗಾಗಿ ಮನೆಯಲ್ಲಿ ಕೊಟ್ಟ ೫೦೦ ಪೆಸೋಸ್ ( ೪೨೦ ರೂ.) ಸಿಕ್ಕಿ ಸಂತೋಷವಾಯಿತು. ಯಾಕೆಂದರೆ ಆ ಹಣ ಹತ್ತು ಗಂಟೆಗಿಂತ ಹೆಚ್ಚು ಅವಧಿಯ ಆಟದ ವೆಚ್ಚಕ್ಕೆ ಸಾಕಾಗುವಷ್ಟಿತ್ತು!

ಮನಶ್ಶಾಸ್ತ್ರಜ್ಞರ ಪ್ರಕಾರ, ಈ ಆಟದಲ್ಲಿರುವ ಅತ್ಯಾಕರ್ಷಣೆ ಹಾಗೂ ಧನಾಕರ್ಷಣೆ ಯುವಜನತೆಯನ್ನು ಅಯಸ್ಕಾಂತದಂತೆ ಸೆಳೆಯುತ್ತಿದೆ. ತಾವು ನಗಣ್ಯರೆಂದು ಭಾವಿಸುವ ಯುವಜನರು ಆನ್‌ಲೈನ್ ಕ್ರೀಡೆಗಳಲ್ಲಿ ಸೈನ್ಯವೊಂದರ ದಂಡನಾಯಕರಾಗಿ ಪರಮಾಧಿಕಾರವನ್ನೂ ಪಡೆದು ಧನ್ಯತಾಭಾವವನ್ನು ಅನುಭವಿಸುತ್ತಾರೆ. ಇದು ಅತ್ಯಧಿಕ ಸಂತೋಷವನ್ನು ನೀಡುವುದರೊಂದಿಗೆ ಅವರ ಬೌದ್ಧಿಕ ಕೌಶಲಕ್ಕೆ ಪಂಥಾಹ್ವಾನವನ್ನು ಕೂಡ ನೀಡುತ್ತದೆ. ಇಂತಹ ಮಿಥ್ಯಾನಂದದಲ್ಲಿ ಅವರು ತಮ್ಮ ದೈನಂದಿನ ಸಮಸ್ಯೆಗಳನ್ನು ಮರೆಯಲಿಚ್ಛಿಸುತ್ತಾರೆ. ಸಿಂಗಾಪುರದ ಮಾನಸಿಕ ಆರೋಗ್ಯ ಸಂಸ್ಥೆಯ ಡೈರೆಕ್ಟರ್ ಡಾ. ಮುನಿ ವಿನ್‌ಸ್ಲೊ ಅವರ ಅಭಿಪ್ರಾಯದಂತೆ, ವಂಶವಾಹಿನಿಯ ಪರಿಣಾಮದಿಂದಾಗಿ ಕೆಲವು ಜನರು ಇಂತಹ ಕ್ರೀಡೆಗಳತ್ತ ಹೆಚ್ಚಾಗಿ ಆಕರ್ಷಿತರಾಗುತ್ತಾರೆ. ನ್ಯೂರೋಟ್ರಾನ್ಸ್‌ಮಿಟರ್ಸ್ ಎಂಬ ಸಹಜವಾಗಿ ಉತ್ಪನ್ನವಾಗುವ ಮಿದುಳಿನ ರಾಸಾಯನಿಕ ಇಂತಹವರಲ್ಲಿ ಬೌದ್ಧಿಕ ವಿಕ್ಷಿಪ್ತತೆಯನ್ನು ಉಂಟುಮಾಡುತ್ತದೆ. ಈ ರಾಸಾಯನಿಕವು ವ್ಯಕ್ತಿಯ ಪ್ರೇರಣಾತ್ಮಕ ಭಾವನೆಗಳನ್ನು, ನಡಾವಳಿಗಳನ್ನು ತನ್ನ ಸಪದಿಗೆ ತೆಗೆದುಕೊಂಡು ಬಿಡುತ್ತದೆ. ಇದರಿಂದ ಅವರು ಮಾನಸಿಕ ಉದ್ವೇಗ ಹಾಗೂ ಅತ್ಯಾಸೆಗಳಿಗೆ ಬಲಿಯಾಗುತ್ತಾರೆ. (*ಕೃಪೆ: 'ಕಸ್ತೂರಿ', ನವೆಂಬರ್ ೨೦೦೭*)